# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:22-02-2014 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು**

**ಶ್ರೀಯುತರುಗಳಾದ**

1. ಲಕ್ಷ್ಮೀಕಾಂತ ರೆಡ್ಡಿ – ಅಧ್ಯಕ್ಷರು
2. ಕೆ.ಮಹೇಶ್ ಬಾಬು – ಸದಸ್ಯರು
3. ಲಲಿತ ಹೆಚ್.ಎಸ್ – ಸದಸ್ಯರು
4. ಎಂ.ಜಿ. ಜಯರತ್ನ – ಸದಸ್ಯರು
5. ಆನಂದ್ ವಿ – ಸದಸ್ಯರು
6. ವರಲಕ್ಷ್ಮಿ ಜೆ – ಸದಸ್ಯರು
7. ಎನ್.ಜಯಪಾಲ – ಸದಸ್ಯರು
8. ಎಂ.ಕೆ. ಗುಣಶೇಖರ್ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

**ಶ್ರೀಯುತರುಗಳಾದ**

ಮುಖ್ಯ ಆರೋಗ್ಯಾಧಿಕಾರಿ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಅಧಿಕ ಕೌನ್ಸಿಲ್ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ ಸಲಹೆಗಾರರು
ಸಹಾಯಕ ಆಯುಕ್ತರು (ಆಡಳಿತ)
ಸಹಾಯಕ ಆಯುಕ್ತರು (ನೇಮಕಾತಿ)
ಸಹಾಯಕ ಕಾನೂನು ಅಧಿಕಾರಿ

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

### ವಿಷಯ ಸಂಖ್ಯೆ: ಸಿಆಸುಸ್ಥಾಸ/33/2012-13

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಶ್ರೀ. ಎನ್. ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರು ಮನವಿ ಸಲ್ಲಿಸಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಧಿಕ ಕಾನೂನು ಸಲಹೆಗಾರನಾಗಿ ಜಿಲ್ಲಾ ನ್ಯಾಯಾಧೀಶರ ಸೂಪರ್ ಟೈಂ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸಿ ದಿನಾಂಕ:30.06.2005ರಲ್ಲಿ ನಿವೃತ್ತಿ ಹೊಂದಿದ್ದು, ನಿವೃತ್ತಿಯಾಗುವ ಅವಧಿಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವಿರುದ್ಧ ಹೂಡಿರುವ ನ್ಯಾಯಾಲಯ ದಾವೆ/ರಿಟ್/ಮೇಲ್ಮನವಿ ಇತ್ಯಾದಿಗಳ ಸಂಪೂರ್ಣ ಮಾಹಿತಿಯನ್ನು ಸಿದ್ಧಗೊಳಿಸಿರುತ್ತೇನೆ. ಅದರಲ್ಲಿ ವಿಷಯವಾರು, ನ್ಯಾಯಾಲಯಗಳವಾರು, ವಾರ್ಷಿಕವಾರು, ನ್ಯಾಯವಾದಿಗಳವಾರು ಪ್ರತ್ಯೇಕಿಸಿ ಯಾವುದೇ ಮಾಹಿತಿಯು ಕ್ಷಣಾರ್ಧದಲ್ಲಿ ಲಭ್ಯವಾಗುವಂತೆ ತಯಾರಿಸಿ ಗಣಕೀಕರಣಗೊಳಿಸಿರುತ್ತೇನೆ. ಮುಖ್ಯವಾಗಿ ನಗರ ಪಾಲಿಕೆ ಸ್ವತ್ತುಗಳ ಬಗ್ಗೆ ಅತಿ ಹೆಚ್ಚು ಮುತುವರ್ಜಿ ವಹಿಸಿ ನಗರ ಪಾಲಿಕೆ ಸ್ವತ್ತುಗಳನ್ನು ಸಂರಕ್ಷಿಸುವಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿರುತ್ತೇನೆ. ಜೊತೆಗೆ ನ್ಯಾಯಾಲಯಗಳ ಆದೇಶವನ್ನು ಪಾಲನೆ ಮಾಡುವುದು ಅಥವಾ ಮೇಲ್ಮನವಿ ಸಲ್ಲಿಸುವುದರೊಂದಿಗೆ ನ್ಯಾಯಾಲಯ ನಿಂದನೆ ಪ್ರಕರಣಗಳು ಆಗದಂತೆ ನೋಡಿಕೊಳ್ಳಲಾಗುತ್ತಿತ್ತು. ದಿನಾಂಕ:16.01.2007ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ಏಳು ಸಿ.ಎಂ.ಸಿ ಪ್ರದೇಶಗಳು, ಒಂದು ಪುರಸಭೆ, ಹೊಸ ಬಿ.ಡಿ.ಎ. ಬಡಾವಣೆ ಮತ್ತು 112 ಹಳ್ಳಿಗಳನ್ನು ಸೇರಿಸಿಕೊಳ್ಳಲಾಗಿರುತ್ತದೆ. ಈ ಪ್ರದೇಶದಲ್ಲಿ ಬರುವ ಸರ್ಕಾರಿ ಸ್ವತ್ತುಗಳನ್ನು ಗುರುತಿಸಿ ಅವುಗಳನ್ನು ನಗರ ಪಾಲಿಕೆ ಆಸ್ತಿ ಪುಸ್ತಕದಲ್ಲಿ ದಾಖಲಿಸಿಕೊಳ್ಳಲು ಕ್ರಮ ತೆಗೆದುಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ ಹಾಗೂ ಈ ಪ್ರದೇಶಗಳಲ್ಲಿನ ಹೊಸ ದಾವೆ/ಮೊಕದ್ದಮೆಗಳನ್ನು ಕೂಡಾ ಕ್ರೂಢೀಕರಿಸಿ ಗಣಕೀಕರಣಗೊಳಿಸಬೇಕಾಗಿರುತ್ತದೆ.

ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಮಹಾನಗರ ಪಾಲಿಕೆಯಲ್ಲಿ ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷಗಳ ಕಾಲ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿರುತ್ತಾರೆ.

ಕಾನೂನು ಕೋಶದ ಮುಖ್ಯಸ್ಥರು ದಿನಾಂಕ:29.06.2012ರಂದು ನೀಡಿರುವ ಅಭಿಪ್ರಾಯ ವರದಿಯಲ್ಲಿ ಸದರಿ ನಿವೃತ್ತ ಅಧಿಕಾರಿಯವರು ದಿನಾಂಕ:21.05.2012ರಂದು ಅರ್ಜಿ ಸಲ್ಲಿಸಿ ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಕಾನೂನು ವಿಭಾಗದ ಸಲಹೆಗಾರರನ್ನಾಗಿ ನೇಮಿಸಲು ಕೋರಿಕೊಂಡಿರುತ್ತಾರೆ. ಪಾಲಿಕೆಯಲ್ಲಿ ಸಿಬ್ಬಂದಿ ಕೊರತೆ ಹೆಚ್ಚಾಗಿದ್ದು ದಿನೇ ದಿನೇ ಪ್ರಕರಣಗಳು ಹೆಚ್ಚಾಗಿರುತ್ತವೆ. ಈ ಸಂಬಂಧ 1977 ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ 20ರನ್ವಯ ಸರ್ಕಾರದ ಪೂರ್ವಾನ್ವಯ ಮಂಜೂರಾತಿ ಪಡೆದು 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದ ಮೇರೆಗೆ ಸದರಿ ನಿಯಮದಡಿ ಸದರಿ ನಿವೃತ್ತ ಅಧಿಕಾರಿಯವರನ್ನು ನೇಮಿಸಿಕೊಳ್ಳಲು ಕ್ರಮವಹಿಸಬಹುದಾಗಿರುತ್ತದೆಯೆಂದು ಅಭಿಪ್ರಾಯ ನೀಡಿರುತ್ತಾರೆ.

ಕಾನೂನು ಕೋಶದ ಮುಖ್ಯಸ್ಥರು ದಿನಾಂಕ:29.06.2012ರಂದು ನೀಡಿರುವ ಅಭಿಪ್ರಾಯದನ್ವಯ ಶ್ರೀ. ಎನ್.ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ಒಂದು ವರ್ಷದ ಅವಧಿಗೆ ಸಂಚಿತ ವೇತನದ ಮೇಲೆ ಪಾಲಿಕೆಯ ಕಾನೂನು ವಿಭಾಗದಲ್ಲಿ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸಲು ದಿನಾಂಕ:28.08.2012ರ ಆದೇಶದಂತೆ ನೇಮಿಸಲಾಗಿರುತ್ತದೆ.

**ಷರತ್ತುಗಳು:–**

1. ಸದರಿಯವರನ್ನು ಸಂಚಿತ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಕೆ.ಸಿ.ಎಸ್.ಆರ್. ನಿಯಮ ಅನ್ವಯಿಸುವುದಿಲ್ಲ.
2. ಸದರಿಯವರನ್ನು ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಮಾತ್ರ ನೇಮಕ ಮಾಡಿಕೊಳ್ಳಲಾಗಿರುತ್ತದೆ.
3. ಸದರಿಯವರು ಮಾನ್ಯ ಆಯುಕ್ತರು ರವರು ಸೂಚಿಸುವ ಎಲ್ಲಾ ಕೆಲಸಗಳನ್ನು ನಿರ್ವಹಿಸತಕ್ಕದ್ದು.
4. ಸದರಿಯವರ ಸೇವೆಯು ಪಾ ಲಿಕೆಗೆ ಅಗತ್ಯವಿಲ್ಲವೆಂದು ಕಂಡುಬಂದರೆ ಯಾವುದೇ ನೋಟೀಸ್ ನೀಡದೆ ಸೇವೆಯಿಂದ ಬಿಡುಗಡೆ ಮಾಡಲಾಗುತ್ತದೆ.
5. ಸದರಿಯವರು ಯಾವುದೇ ರೀತಿಯ ಹಣಕಾಸಿನ ಕಡತಗಳಿಗೆ ಅನುಮೋದನೆ ಅಥವಾ ಸಹಿ ಮಾಡುವ ಹಾಗೂ ಶಾಸನಬದ್ಧ ಅಧಿಕಾರವನ್ನು ಹೊಂದಿರುವುದಿಲ್ಲ.

ನಂತರದಲ್ಲಿ ಶ್ರೀ. ಎನ್. ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರನ್ನು ಪಾಲಿಕೆಯಲ್ಲಿ ಕಾನೂನು ಸಲಹೆಗಾರರಾಗಿ ನೇಮಿಸಿಕೊಂಡಿರುವಂತೆ ಇವರಿಗೆ ಈ ಕಛೇರಿಯ ದಿನಾಂಕ:21.12.2012ರ

ಆದೇಶದಂತೆ ಮಾಹೆಯಾನ ರೂ.30,000/-(ಮೂವತ್ತು ಸಾವಿರ)ಗಳ ಸಂಚಿತ ವೇತನವನ್ನು ನಿಗಧಿಪಡಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರಿ. ಎನ್. ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರನ್ನು ಪಾಲಿಕೆಯಲ್ಲಿ ಒಂದು ವರ್ಷದ ಅವಧಿಗೆ ಕಾನೂನು ಸಲಹೆಗಾರರಾಗಿ ಮಾಹೆಯಾನ ರೂ.30,000/-(ಮೂವತ್ತು ಸಾವಿರ)ಗಳ ಸಂಚಿತ ವೇತನದ ಮೇಲೆ ನೇಮಿಸಿಕೊಂಡಿರುವ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ಕೋರಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:17.01.2013ರ ಸಂಖ್ಯೆ:ಬಿ12(3ಎ)/ಪಿಆರ್/31/2012-13ರ ಟಿಪ್ಪಣಿ

ಈ ಕುರಿತಂತೆ ದಿನಾಂಕ:25-02-2013 ರಂದು ಈ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸಿ ಮರುಮಂಡಿಸಲು ಆಯುಕ್ತರಿಗೆ ಸೂಚಿಸಿ ನಿರ್ಣಯ ಕೈಗೊಳ್ಳಲಾಗಿರುತ್ತದೆ.

(1) ದಿನಾಂಕ:28.08.2012ರಂದು ಕಛೇರಿ ಆದೇಶ ಹೊರಡಿಸುವ ಮುನ್ನ ಸಮಿತಿಯ ಅಭಿಪ್ರಾಯ ಪಡೆಯುವ ಅವಶ್ಯಕತೆ ಇಲ್ಲವೆ?

(2) ಸದರಿಯವರಿಗೆ ಸಂಚಿತ ವೇತನವನ್ನು ಕೆ.ಸಿ.ಎಸ್.ಆರ್. ನಿಯಮ 313 ಬಿ(1) ರೀತ್ಯಾ ಪಾವತಿಸಲಾಗುತ್ತಿದೆಯೆ ಹಾಗೂ ಇವರಿಗೆ ಬೇರೆ ಯಾವ ವಿಧವಾದ ಸೌಲಭ್ಯಗಳನ್ನು ನೀಡಲಾಗುತ್ತಿದೆ ವರದಿ ನೀಡಿ.

(3) ಈಗಾಗಾಲೇ 6 ತಿಂಗಳುಗಳ ಅವಧಿಯು ಮುಗಿಯಲಿದ್ದು, ಸಮಿತಿಯ ಹಾಗೂ ಪಾಲಿಕೆಯ ತೀರ್ಮಾನದ ನಂತರ ಸರ್ಕಾರದ ಅನುಮತಿಯು ಅತ್ಯವಶ್ಯಕವಿದ್ದು, ಒಂದು ಪಕ್ಷ ಸರ್ಕಾರವು ಈ ಹಿಂದೆ ಶ್ರೀ. ಎನ್.ಎಸ್. ಗುಂಡಪ್ಪ, ನಿವೃತ್ತ ನೌಕರರ ನಿಯೋಜನೆಯನ್ನು ತಿರಸ್ಕರಿಸಿದಂತೆ ಇವರ ಪ್ರಸ್ತಾವನೆಯನ್ನು ತಿರಸ್ಕರಿಸಿದಲ್ಲಿ ಇದರಿಂದ ಉಂಟಾಗುವ ನಷ್ಟ ಹಾಗೂ ಇತರೆ ಪ್ರಕ್ರಿಯೆಗಳಿಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

(4) ಸರ್ಕಾರದ ನಿಯಮಗಳ ಅನುಸಾರ ನಿವೃತ್ತ ಅಧಿಕಾರಿಗಳ ವಯೋಮಿತಿ ಅನುಸಾರವಾಗಿ ಮರು ನೇಮಕಾತಿ ಮಾಡಿಕೊಳ್ಳಲಾಗಿದೆಯೇ?

ನ್ಯೂನತೆಗೆ ಸಂಬಂಧಿಸಿದಂತೆ ಆಯುಕ್ತರ ಆದೇಶದ ಪ್ರಕಾರ ಅಪರ ಆಯುಕ್ತರು (ಆಡಳಿತ) ರವರು ಸ್ಪಷ್ಟೀಕರಣ ನೀಡಿರುವ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 17-01-2013 ರ ಸಂಖ್ಯೆ: ಬಿ12 (3ಎ) ಪಿಆರ್/31/12-13 ರ ಟಿಪ್ಪಣಿಯನ್ನು ಒಪ್ಪಿರುವ ದಿನಾಂಕ: 11-02-2013 ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ನಿರ್ಣಯ.

**<u>ನಿರ್ಣಯ:</u> ದಿನಾಂಕ: 11-02-2013 ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಪರಿಶೀಲಿಸಿ ಸಮಿತಿಯು ಆಯುಕ್ತರ ದಿನಾಂಕ:17-01-2013 ರ ಟಿಪ್ಪಣಿಯನ್ನು ತಿರಸ್ಕರಿಸಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: ಸಿಆಸುಸ್ಥಾಸ/35/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಡಾ॥ ಎ.ಎಸ್. ಬಾಲಸುಂದರ್, ಉಪ ಆರೋಗ್ಯಾಧಿಕಾರಿ, ಪೂರ್ವ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರನ್ನು ಮುಖ್ಯ ಆರೋಗ್ಯಾಧಿಕಾರಿಗಳ ಈ ಕೆಳಕಂಡ ವರದಿಯಂತೆ "ಪಾಲಿಕೆಯಲ್ಲಿ 06 ರೆಫೆರಲ್ ಆಸ್ಪತ್ರೆಗಳು ಮತ್ತು 23 ಹೆರಿಗೆ ಆಸ್ಪತ್ರೆಗಳಿದ್ದು, ಇಲ್ಲಿ ಸಂತಾನಹರಣ ಚಿಕಿತ್ಸೆ, ಸಿಸೇರಿಯನ್ ಚಿಕಿತ್ಸೆ ಹಾಗೂ ಸ್ತ್ರೀ ರೋಗಕ್ಕೆ ಸಂಬಂಧಪಟ್ಟ ಅನೇಕ ರೀತಿಯ ಶಸ್ತ್ರ ಚಿಕಿತ್ಸೆಗಳನ್ನು ಮಾಡಲಾಗುತ್ತಿದೆ ಮತ್ತು ಈ ಎಲ್ಲಾ ಶಸ್ತ್ರಚಿಕಿತ್ಸೆಗಳಿಗೆ ಅರವಳಿಕೆ ತಜ್ಞರ (Anesthetist) ಅವಶ್ಯಕತೆ ಇರುತ್ತದೆ. ಪಾಲಿಕೆಯ ಖಾಯಂ ವೈದ್ಯರುಗಳಲ್ಲಿ ಪ್ರಸ್ತುತ ಕೇವಲ ಇಬ್ಬರು ಅರವಳಿಕೆ ತಜ್ಞರು ಮಾತ್ರ ಇದ್ದು, ಉಳಿದವರು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ 2009ನೇ ಸಾಲಿನಲ್ಲಿ ಪಾಲಿಕೆಯ ವೈದ್ಯರುಗಳಿಗೆ ರಾಜೀವ್‌ಗಾಂಧಿ ಹೆಲ್ತ್ ಯೂನಿವರ್ಸಿಟಿಯವರು ನಡೆಸುವ ಕೌನ್ಸಿಲಿಂಗ್‌ನಲ್ಲಿ ಒಂದು ಸೀಟು ಅರವಳಿಕೆ ತಜ್ಞರ (MD-Anesthesia) ವಿಷಯದಲ್ಲಿ ಮೀಸಲಿಡಬೇಕೆಂದು ಕೋರಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ರವರಿಗೆ ಈ ಕಛೇರಿಯಿಂದ ಪತ್ರ ಬರೆಯಲಾಗಿದ್ದು, ಡಾ॥ ಎ.ಎಸ್. ಬಾಲಸುಂದರ್, ರವರಿಗೆ ಮೊದಲನೇ ಸುತ್ತಿನ ಕೌನ್ಸಿಲಿಂಗ್‌ನಲ್ಲಿ MD-Anesthesia ವಿಷಯದಲ್ಲಿ ಸೀಟು ದೊರಕಿರುವುದಿಲ್ಲ. ಬದಲಾಗಿ ಅಂತಿಮ ಸುತ್ತಿನ ಕೌನ್ಸಿಲಿಂಗ್‌ನಲ್ಲಿ ದೊರಕಿದ್ದು, ದಿನಾಂಕ:19.06.2009ರಂದು ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ ಪ್ರವೇಶ ಪಡೆದು ಉನ್ನತ ವ್ಯಾಸಂಗಕ್ಕೆ ದಾಖಲಾಗಿರುತ್ತಾರೆ. ಡಾ॥ ಎ.ಎಸ್.ಬಾಲಸುಂದರ್, ರವರು ಪಾಲಿಕೆಯ ಖಾಯಂ ನೌಕರರಾಗಿದ್ದು, ಇವರು ತಮ್ಮ ಸ್ವಂತ ಅರ್ಹತೆಯ ಮೇಲೆ PGET-2009 ಪರೀಕ್ಷೆಯಲ್ಲಿ ಸೀಟು ಗಳಿಸಿದ್ದು, ಇವರ ಸೇವೆಯನ್ನು ಉನ್ನತ ವ್ಯಾಸಂಗದ ನಂತರ ಪಾಲಿಕೆಯ ಆಸ್ಪತ್ರೆಗಳಲ್ಲಿ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

ಆದ್ದರಿಂದ ಡಾ॥ ಎ.ಎಸ್. ಬಾಲಸುಂದರ್, ರವರನ್ನು ಈಗಾಗಲೇ ನೀಡಿರುವ ಮಾನ್ಯ ಆಯುಕ್ತರ ಆದೇಶದಂತೆ ಹುಬ್ಬಳ್ಳಿಯ ಕಿಮ್ಸ್ ಕಾಲೇಜಿಗೆ ಉನ್ನತ ವ್ಯಾಸಂಗಕ್ಕೆ ಬಿಡುಗಡೆಗೊಳಿಸಿ ನಿಯೋಜಿಸಿರುವುದನ್ನು ಮಾರ್ಪಡಿಸಿ ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಲು ನಿಯೋಜಿಸಲು ಶಿಫಾರಸ್ಸು ಮಾಡುತ್ತಾ, ಆಯುಕ್ತರ ಕಛೇರಿಯಿಂದ ತಿದ್ದುಪಡಿ ಆದೇಶ ಹೊರಡಿಸಲು ಕೋರಿ ಕಡತವನ್ನು ಮಂಡಿಸಿರುತ್ತಾರೆ.

ಮುಖ್ಯ ಆರೋಗ್ಯಾಧಿಕಾರಿಗಳ ವರದಿಯನ್ವಯ ಡಾ॥ ಎ.ಎಸ್.ಬಾಲಸುಂದರ್, ಉಪ ಆರೋಗ್ಯಾಧಿಕಾರಿ(ಪೂರ್ವ)ರವರನ್ನು ಕಛೇರಿ ಆದೇಶದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಲು ಪಾಲಿಕೆಯ ವತಿಯಿಂದ ನಿಯೋಜಿಸಲಾಗಿದೆ.

ಸದರಿಯವರು ಉನ್ನತ ವ್ಯಾಸಂಗ ಪೂರ್ಣಗೊಳಿಸಿ ದಿನಾಂಕ:23.05.2012ರಂದು ಪಾಲಿಕೆಗೆ ಹಿಂದಿರುಗಿ ಹಾಜರಾಗಿರುತ್ತಾರೆ. ಸದರಿಯವರ ಹಾಜರಾತಿಯನ್ನು ಪರಿಗಣಿಸಿ ಇವರನ್ನು ಉನ್ನತ ವ್ಯಾಸಂಗಕ್ಕೆ ತೆರಳಿದ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉಪ ಆರೋಗ್ಯಾಧಿಕಾರಿ(ಪೂರ್ವ) ಹುದ್ದೆಗೆ ನಿಯೋಜಿಸಲಾಗಿದೆ.

ಮುಖ್ಯ ಆರೋಗ್ಯಾಧಿಕಾರಿಗಳವರ ಕಛೇರಿ ಆದೇಶದಲ್ಲಿ ಸದರಿಯವರನ್ನು ಉಪ ಆರೋಗ್ಯಾಧಿಕಾರಿ(ಪೂರ್ವ) ಕಛೇರಿಯ ಕೆಲಸ ಕಾರ್ಯಭಾರಗಳ ಜೊತೆಗೆ ಅಧಿಕವಾಗಿ ಪೂರ್ವ ವಲಯದ ಪಾಲಿಕೆಯ ರೆಫೆರಲ್ ಆಸ್ಪತ್ರೆಗಳ ಅಗತ್ಯವಿದ್ದ ಕಡೆಗಳಲ್ಲಿ ಹಾಗೂ ಸಂಬಂಧಪಟ್ಟ ಆಸ್ಪತ್ರೆಗಳ ವೈದ್ಯಕೀಯ ಅಧೀಕ್ಷಕರುಗಳ ಕೋರಿಕೆಯ ಆದ್ಯತೆಯ ಮೇರೆಗೆ ಅರವಳಿಕೆ ಶಾಸ್ತ್ರದ ತಜ್ಞರಾಗಿ ಮುಂದಿನ ಆದೇಶವರೆವಿಗೂ ಕಾರ್ಯನಿರ್ವಹಿಸಲು ನೇಮಿಸಿರುತ್ತಾರೆ.

ಪ್ರಸ್ತುತ ಪಾಲಿಕೆಯ ಆಸ್ಪತ್ರೆಗಳಲ್ಲಿ ಅರವಳಿಕೆ ತಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ಸೇವೆ ಪಡೆದುಕೊಳ್ಳುತ್ತಿದ್ದು, ಇವರುಗಳಿಗೆ ಮೈನರ್ ಶಸ್ತ್ರಚಿಕಿತ್ಸೆಗೆ ರೂ.500/– ಹಾಗೂ ಮೇಜರ್ ಶಸ್ತ್ರ ಚಿಕಿತ್ಸೆಗೆ ರೂ. 1000/–ರಂತೆ ಒಂದು ರೆಫರಲ್ ಆಸ್ಪತ್ರೆಗೆ ತಿಂಗಳಿಗೆ ಸುಮಾರು 50,000/–ದಂತೆ 06 ರೆಫರಲ್ ಆಸ್ಪತ್ರೆಗಳಿಗೆ 2,50,000/– ದಿಂದ 3,00,000/–ರೂ ಗಳು ಖರ್ಚಾಗುತ್ತಲಿದ್ದು, ಆದ್ದರಿಂದ ಪಾಲಿಕೆಯ ವತಿಯಿಂದ ಅರವಳಿಕೆ ತಜ್ಞರ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗಕ್ಕೆ ನಿಯೋಜಿಸಿರುವುದರಿಂದ ಡಾ॥ ಎ.ಎಸ್. ಬಾಲಸುಂದರ್, ಉಪ ಆರೋಗ್ಯಾಧಿಕಾರಿ(ಪೂರ್ವ) ರವರನ್ನು ವಿಶೇಷ ಸ್ನಾತಕೋತ್ತರ ವಿಭಾಗದಲ್ಲಿ ಮುಂದುವರೆಸುವ ಬಗ್ಗೆ ದಿನಾಂಕ:29.09.2012ರ ಪಾಲಿಕೆಯ ಮಾಸಿಕ ಸಭೆಯಲ್ಲಿ ಚರ್ಚೆಯಾಗಿದ್ದು, ಈ ಸಂಬಂಧ ಅಭಿಪ್ರಾಯ ಪಡೆಯಲು ಕಡತವನ್ನು ಕಾನೂನು ಕೋಶದ ಮುಖ್ಯಸ್ಥರಿಗೆ ಕಳುಹಿಸಲಾಗಿ, ಕಾನೂನು ಕೋಶದ ಮುಖ್ಯಸ್ಥರು ಈ ಕೆಳಕಂಡಂತೆ ವರದಿ ನೀಡಿರುತ್ತಾರೆ.

"ಡಾ॥ ಎ.ಎಸ್.ಬಾಲಸುಂದರ್, (MD-Anesthesia) ರವರನ್ನು ಪಾಲಿಕೆಯ ಆರೋಗ್ಯ ವಿಭಾಗದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಆಯುಕ್ತರ ಅನುಮೋದನೆ ಪಡೆದು ಅರವಳಿಕೆ ತಜ್ಞರ (Anesthesia) ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಲು ನಿಯಮಾನುಸಾರ ಕ್ರಮವಹಿಸಬಹುದಾಗಿದೆ" ಎಂದು ಅಭಿಪ್ರಾಯಿಸಿರುತ್ತಾರೆ.

ಸದರಿ ವರದಿಗಳನ್ವಯ ಡಾ॥ ಎ.ಎಸ್. ಬಾಲಸುಂದರ್, ಉಪ ಆರೋಗ್ಯಾಧಿಕಾರಿ(ಪೂರ್ವ) ರವರು ಅರವಳಿಕೆ ತಜ್ಞರ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಪೂರ್ಣಗೊಳಿಸಿ ಹಿಂದಿರುಗಿರುವುದರಿಂದ ಇವರ ಮುಂದಿನ ಮುಂಬಡ್ತಿ ಹುದ್ದೆಯಾದ ಆರೋಗ್ಯಾಧಿಕಾರಿ ಹುದ್ದೆಗೆ ಸಮಾನಾಂತರವಾಗಿ ವೇತನ ಶ್ರೇಣಿ ರೂ.40050–56550 ರಲ್ಲಿ "ಅರವಳಿಕೆ ತಜ್ಞರ ವಿಭಾಗದ ಮುಖ್ಯಸ್ಥರು" ಹುದ್ದೆಯನ್ನು ಸೃಜಿಸುವ ಕುರಿತಂತೆ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:11.02.2013ರ ಸಂಖ್ಯೆ:ಬಿ12(4)ಪಿಆರ್/244/2008–09ರ ಟಿಪ್ಪಣಿ.

ಈ ಕುರಿತಂತೆ ದಿನಾಂಕ:25–02–2013 ರಂದು ಈ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸಿ ಮರುಮಂಡಿಸಲು ಆಯುಕ್ತರಿಗೆ ಸೂಚಿಸಿ ನಿರ್ಣಯ ಕೈಗೊಳ್ಳಲಾಗಿರುತ್ತದೆ.

(1) ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಈ ಹುದ್ದೆಯು ಮಂಜೂರಾಗಿರುವುದೇ?

(2) ಸದರಿ ವೈದ್ಯರನ್ನು ಈ ಹಿಂದೆ ಯಾವ ಉದ್ದೇಶಕ್ಕಾಗಿ ಉನ್ನತ ವ್ಯಾಸಂಗಕ್ಕೆ ಕಳುಹಿಸಲಾಗಿರುತ್ತದೆ ಹಾಗೂ ಇದಕ್ಕೆ ತಗಲಿರುವ ವೆಚ್ಚದ ವಿವರ ನೀಡುವುದು.

(3) ಸದರಿಯವರನ್ನು ಹುಬ್ಬಳ್ಳಿಯ ಕಿಮ್ಸ್ ಕಾಲೇಜಿಗೆ ಉನ್ನತ ವ್ಯಾಸಂಗದ ಸಲುವಾಗಿ ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಸಿ ನಿಯೋಜಿಸಿರುವ ದಿನಾಂಕದ ಬಗ್ಗೆ ವಿವರಣೆ.

(4) ಮೇಲ್ಕಂಡ ಆದೇಶವನ್ನು ಮಾರ್ಪಡಿಸಿ ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ (MD. Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಲು ನಿಯೋಜಿಸಲು ಶಿಫಾರಸ್ಸು ಮಾಡುತ್ತಾ ತಿದ್ದುಪಡಿ ಆದೇಶ ಹೊರಡಿಸಲು ಕೋರಿರುವ ಪ್ರಸ್ತಾವನೆಗೆ ನಿಯಮಾವಳಿಗಳಲ್ಲಿ ಅವಕಾಶವಿದಯೇ?

(5) ಸದರಿ ವೈದ್ಯರು ಅರವಳಿಕೆ ತಜ್ಞರ ಹುದ್ದೆಯಲ್ಲಿ ಪಾಲಿಕೆ ವೆಚ್ಚದಿಂದ ಉನ್ನತ ವ್ಯಾಸಂಗ ಪಡೆದಿದ್ದು, ಅವರನ್ನು ಕ್ಲಿನಿಕಲ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುವ ಬದಲಿಗೆ ನಾನ್ ಕ್ಲಿನಿಕಲ್ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ನಿಯೋಜಿಸಿರುವ ಕ್ರಮವು ಸಮಂಜಸವೇ.

(6) ಪ್ರಸ್ತಾವನೆ ಕುರಿತಂತೆ ವೇತನದ ವ್ಯತ್ಯಾಸ ವಿವರಣೆಗಳ ತಃಖ್ತೆ (Preposition Statement) ಕಡತದಲ್ಲಿ ಲಭ್ಯವಿರುವುದಿಲ್ಲ. ಈ ಬಗ್ಗೆ ಮಾಹಿತಿ ಒದಗಿಸುವುದು.

(7) ಈ ಪ್ರಕರಣವು ಪಾಲಿಕೆಯ ಆಸ್ಪತ್ರೆಗಳ ಹಿತದೃಷ್ಟಿಯಿಂದ ಅತಿ ಮುಖ್ಯವಾದ ವಿಷಯವಾಗಿದ್ದು ಇಲಾಖಾ ಮುಖ್ಯಸ್ಥರಾದ ಮುಖ್ಯ ಆರೋಗ್ಯಾಧಿಕಾರಿಗಳ ಅನುಪಸ್ಥಿತಿಯಿಂದಾಗಿ ಸಮಿತಿಯು ಯಾವುದೇ ವಿಧವಾದ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗದೇ ಇದ್ದು, ಸದರಿ ಅಧಿಕಾರಿಗಳ ಬೇಜವಾಬ್ದಾರಿ ಬಗ್ಗೆ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ.

ನ್ಯೂನತೆಗೆ ಸಂಬಂಧಿಸಿದಂತೆ ಆಯುಕ್ತರ ಆದೇಶದ ಪ್ರಕಾರ ಅಪರ ಆಯುಕ್ತರು (ಆಡಳಿತ) ರವರು ಸ್ಪಷ್ಟೀಕರಣ ನೀಡಿರುವ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 11–02–2013 ರ ಸಂಖ್ಯೆ: ಬಿ12 (4)ಪಿಆರ್/244/08–09 ರ ಟಿಪ್ಪಣಿ.

**<u>ನಿರ್ಣಯ:</u> ಆಯುಕ್ತರ ದಿನಾಂಕ:11–02–2013 ರ ಟಿಪ್ಪಣಿಯನ್ನು ತಿರಸ್ಕರಿಸಲು ಸಮಿತಿಯು ತೀರ್ಮಾನಿಸಿತು.**

**ವಿಷಯ ಸಂಖ್ಯೆ: ಸಿಆಸುಸ್ಥಾಸ/12/2013–14**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಇದರ ಕಾರ್ಯವ್ಯಾಪ್ತಿಯು ವಿಸ್ತಾರವಾಗಿರುತ್ತದೆ. ಸುಮಾರು 225 ಚ.ಕಿ.ಮೀ.ನಿಂದ 800 ಚ.ಕಿ.ಮೀ.ಗೆ ಭೌಗೋಳಿಕ ವಿಸ್ತಾರಗೊಂಡು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯವ್ಯಾಪ್ತಿಯೂ ಸಹ ವಿಸ್ತಾರಗೊಂಡಿದ್ದು, ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಣಿ–ಪಕ್ಷಿಗಳನ್ನು ಸಂರಕ್ಷಿಸಲು ಹಾಗೂ ತೊಂದರೆಗೆ ಸಿಲುಕಿಕೊಂಡ ಕೋತಿ, ಹಾವು, ನಾಯಿ ಹಾಗೂ ಇನ್ನಿತರೆ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸಿ ಮತ್ತು ಮನುಷ್ಯರಿಂದಾಗಲಿ ಅಥವಾ ಪ್ರಾಣಿ–ಪಕ್ಷಿಗಳಿಂದಾಗಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವಂತಹ ಕಾರ್ಯನಿರ್ವಹಿಸಲು ಪರಿಸರ ಸಲಹೆಗಾರರ ತಂಡವಾಗಿ ಶ್ರೀ

ಶರತ್ ಬಾಬು, ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡವನ್ನು ಗುತ್ತಿಗೆ ಆಧಾರದ ಮೇಲೆ ನಿಶ್ಚಿತ ಮಾಸಿಕ ಸಂಭಾವನೆಯಲ್ಲಿ ಆಗಸ್ಟ್ 2007ರಿಂದ ಮಾರ್ಚ್ 2012ರವರೆಗೆ ಪಾಲಿಕೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಏಪ್ರಿಲ್ 2007ರಿಂದ ಮಾರ್ಚ್ 2013ರವರೆವಿಗೂ ವನ್ಯಜೀವಿ ಸಂರಕ್ಷಣಾ ತಂಡವನ್ನು ನಿಶ್ಚಿತ ಮಾಸಿಕ ವೇತನದಲ್ಲಿ ಮುಂದುವರೆಸಲಾಗಿರುತ್ತದೆ. ಸದರಿ ತಂಡದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಪಾಲಿಕೆ ವತಿಯಿಂದ (ವೈದ್ಯಕೀಯ ವೆಚ್ಚ ಹಾಗೂ ಪೆಟ್ರೋಲ್ ವೆಚ್ಚವನ್ನೊಳಗೊಂಡಂತೆ) ಈ ಕೆಳಕಂಡಂತೆ ನೀಡಲಾಗಿರುತ್ತದೆ. ಸದರಿ ವನ್ಯಜೀವಿ ಸಂರಕ್ಷಣಾ ಸಲಹೆಗಾರರು ತಂಡವನ್ನು ಏಪ್ರಿಲ್ 2013ರಿಂದ ಮಾರ್ಚ್ 2014ರವರೆಗೆ ಮುಂದುವರೆಸಲು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) ವಲಯ ರವರು ವರದಿ ಸಲ್ಲಿಸಿ ಕೋರಿರುತ್ತಾರೆ.

| ಕ್ರ. ಸಂ. | ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡದ ವಿವರ | 2012–13ನೇ ಸಾಲಿಗೆ ಪರಷ್ಕರಣೆಗೊಳಿಸುವಂತೆ ಕೋರಿರುವ ನಿಶ್ಚಿತ ಮಾಸಿಕ ಸಂಭಾವನೆ |
|---|---|---|
| 1 | ಶ್ರೀ ಶರತ್ ಬಾಬು, (ಪರಿಸರ ಸಲಹೆಗಾರರು) | 16000/– |
| 2 | ಶ್ರೀ ಮಂಜುನಾಥ್, (ಪರಿಸರ ಸಹಾಯಕರು) | 9000/– |
| 3 | ಶ್ರೀ ಕುಮಾರ್, (ಪರಿಸರ ಸಹಾಯಕರು) | 9000/– |
| 4 | ಶ್ರೀ ಮೋಹನ್, (ಹಿರಿಯ ಪರಿಸರ ಸಹಾಯಕರು) | 8000/– + 1000/– |
| 5 | ಮಹೇಶ್‌ಕುಮಾರ್ ಬಿ.ಆರ್. (ಹಿರಿಯ ಪರಿಸರ ಸಹಾಯಕರು) | 8000/– + 1000/– |
| 6 | ಶ್ರೀ ಶಿವರಾಜ್, (ಹಿರಿಯ ಪರಿಸರ ಸಹಾಯಕರು) | 8000/– + 1000/– |

ಏಪ್ರಿಲ್–2013 ರಿಂದ ಮಾರ್ಚ್–2014 ರವರೆಗೆ ವನ್ಯಜೀವಿ ಸಲಹೆಗಾರರ ತಂಡವನ್ನು ನಿಶ್ಚಿತ ಮಾಸಿಕ ಸಂಭಾವನೆಯಲ್ಲಿ ಪಾಲಿಕೆಯಲ್ಲಿ ಮುಂದುವರೆಸಲು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ಕೇಂದ್ರ ವಲಯ ರವರು ಕೋರಿರುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಕಡತ ಸಂಖ್ಯೆ: ಬಿ12 (5ಹೆಚ್)ಪಿಆರ್–57/2010–11 ರಲ್ಲಿ ಆಯುಕ್ತರು ಮಂಡಿಸಿರುವ ದಿನಾಂಕ:11–12–2013 ರ ಟಿಪ್ಪಣಿ.

**<u>ನಿರ್ಣಯ:</u> ಆಯುಕ್ತರ ದಿನಾಂಕ: 11–12–2013 ರ ಟಿಪ್ಪಣಿಯನ್ನು ಒಪ್ಪಲು ಸಮತಿಯು ತೀರ್ಮಾನಿಸಿತು**

**ವಿಷಯ ಸಂಖ್ಯೆ: ಸಿಆಸುಸ್ಥಾಸ/13/2013–14**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಅಧ್ಯಕ್ಷರು, ವಾರ್ಡಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಮಾನ್ಯ ಆಯುಕ್ತರವರಿಗೆ ಪತ್ರ ಬರೆದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಗರದ ನಾಗರೀಕರಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವುದರೊಂದಿಗೆ ರಾಜ್ಯಕ್ಕೆ ಹಾಗೂ ಬೆಂಗಳೂರು ನಗರಕ್ಕೆ ಕೊಡುಗೆ ನೀಡಿದ ವಿವಿಧ ಗಣ್ಯರಿಗೆ ಗೌರವ ಸಲ್ಲಿಸುವುದು ಸಹ ಪ್ರಮುಖ ಆದ್ಯ ಕರ್ತವ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಗೌರವಪೂರ್ವಕವಾಗಿ ಪಾಲಿಕೆಯ ಎಲ್ಲಾ ಕಛೇರಿಗಳಲ್ಲಿ ಸಾರ್ವಜನಿಕರಿಗೆ ಗೋಚರಿಸುವಂತೆ ಗಣ್ಯರ ಭಾವಚಿತ್ರವನ್ನು ಅಳವಡಿಸುವುದು ಸೂಕ್ತವಾಗಿರುತ್ತದೆ ಎಂದು ತಿಳಿಸುತ್ತಾ, ಪಾಲಿಕೆಯ ಕೇಂದ್ರ ಕಛೇರಿ ಮತ್ತು 8 ವಲಯದ ಜಂಟಿ ಆಯುಕ್ತರ ಕಛೇರಿಗಳನ್ನೊಳಗೊಂಡಂತೆ 9 ಕಡತಗಳಲ್ಲಿ ಒಂದೇ ಮಾದರಿ (3X2 ಅಳತೆಯ) ನಾಡಪ್ರಭು ಕೆಂಪೇಗೌಡರು,

ಡಾ॥ ಬಿ.ಆರ್.ಅಂಬೇಡ್ಕರ್ ಮತ್ತು ಶ್ರೀ ಸರ್. ಎಂ. ವಿಶ್ವೇಶ್ವರಯ್ಯ ರವರ ಭಾವಚಿತ್ರಗಳನ್ನು ಹಾಗೂ ಇದೇ ರೀತಿ ಎಲ್ಲಾ ವಲಯದ ಅಧೀನ ಕಛೇರಿಗಳಲ್ಲಿಯೂ ಸಹ ಒಂದೇ ಮಾದರಿ (2X1 2/1 ಆಳತೆಯ) ಭಾವಚಿತ್ರಗಳನ್ನು ಅಳವಡಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈಗಾಗಲೇ ಕೇಂದ್ರ ಕಛೇರಿ ವಲಯ ಮತ್ತು ಉಪ ವಿಭಾಗದ ಕಛೇರಿಗಳಲ್ಲಿ ನಾಡಪ್ರಭು ಕೆಂಪೇಗೌಡರ ಮತ್ತು ಡಾ॥ ಬಿ.ಆರ್. ಅಂಬೇಡ್ಕರ್ ರವರ 12" X16" ಅಳತೆಯ ಭಾವಚಿತ್ರಗಳನ್ನು ಅಳವಡಿಸಲಾಗಿದೆ. ಕೆಲವೊಂದು ಕಛೇರಿಗಳು ನವೀಕರಣ ಮತ್ತು ಸ್ಥಳಾಂತರಗೊಂಡಿರುವುದರಿಂದ ಅಂತಹ ಕಛೇರಿಗಳಲ್ಲಿ ಭಾವಚಿತ್ರಗಳು ಇಲ್ಲದೇ ಇರಬಹುದು. ವಲಯ ಮತ್ತು ಉಪ ವಿಭಾಗಗಳಿಂದ ಭಾವಚಿತ್ರಗಳ ಅವಶ್ಯಕತೆ ಬಗ್ಗೆ ಮಾಹಿತಿ ಪಡೆದುಕೊಂಡು, ಅವಶ್ಯವಿರುವ ಪಾಲಿಕೆಯ ಕೇಂದ್ರ ಕಛೇರಿ ಮತ್ತು 8 ವಲಯದ ಜಂಟಿ ಆಯುಕ್ತರ ಕಚೇರಿಗಳನ್ನೊಳಗೊಂಡಂತೆ 9 ಕಡೆಗಳಲ್ಲಿ ಒಂದೇ ಮಾದರಿಯ (3X2 ಅಳತೆಯ) ನಾಡಪ್ರಭು ಕೆಂಪೇಗೌಡರು ಡಾ॥ ಬಿ.ಆರ್. ಅಂಬೇಡ್ಕರ್ ಮತ್ತು ಶ್ರೀ ಸರ್.ಎಂ. ವಿಶ್ವೇಶ್ವರಯ್ಯರವರ ಭಾವಚಿತ್ರಗಳನ್ನು ಹಾಗೂ ಇದೇ ರೀತಿ ಅವಶ್ಯವಿರುವ ಎಲ್ಲಾ ವಲಯದ ಅಧೀನ ಕಛೇರಿಗಳಲ್ಲಿಯೂ ಸಹ ಒಂದೇ ಮಾದರಿ (2X1 2/1 ಆಳತೆಯ) ಭಾವಚಿತ್ರಗಳನ್ನು

ಅಳವಡಿಸಿಕೊಳ್ಳುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಕಡತ ಸಂಖ್ಯೆ:ಬಿ12 (ಸಿ1)ಪಿಆರ್-108/2013-14 ರಲ್ಲಿ ಆಯುಕ್ತರು ಮಂಡಿಸಿರುವ ದಿನಾಂಕ:06-01-2014.

**<u>ನಿರ್ಣಯ:</u> ಆಯುಕ್ತರ ದಿನಾಂಕ:06-01-2014 ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

---

**ವಿಷಯ ಸಂಖ್ಯೆ: ಸಿಆಸುಸ್ಥಾಸ/14/2013-14**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಸರ್ಕಾರದ ಆದೇಶದಂತೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ಬಗ್ಗೆ ಹೊರಡಿಸಿರುವ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ. ಅಧಿಸೂಚನೆ ರೀತ್ಯಾ ರಚಿಸಿರುವ ನಿಯಮಗಳು ಈ ಕೆಳಕಂಡಂತಿರುತ್ತದೆ

## <u>ನಿಯಮಗಳು</u>

1. **<u>ಶೀರ್ಷಿಕೆ, ಪ್ರಾರಂಭ ಮತ್ತು ಅನ್ವಯ:-</u>** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012 ಎಂದು ಕರೆಯತಕ್ಕದ್ದು.

(2) ಇವು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ವಾಹನ ಚಾಲಕರು, ಪ್ರಾಥಮಿಕ ಶಾಲಾ ಶಿಕ್ಷಕರು, ಪೋಲೀಸ್ ಕಾನ್ಸ್‌ಟೇಬಲ್‌ಗಳು, ನರ್ಸ್‌ಗಳು, ರೇಷ್ಮೆ ಪ್ರದರ್ಶಕರು, ಅರಣ್ಯ ರಕ್ಷಕರು, ಅಬಕಾರಿ ರಕ್ಷಕರು, ಆರೋಗ್ಯ ಕಾರ್ಯಕರ್ತರು, ಅರಣ್ಯ ವೀಕ್ಷಕರು, ಬೇಲಿಫ್ಸ್ ಮತ್ತು ಪ್ರೋಸಸ್ ಸರ್ವರ್‌ಗಳು ಮತ್ತು ಡಿ ಗುಂಪಿನ ಹುದ್ದೆಗಳು ಈ ಹುದ್ದೆಗಳಿಗೆ ಆಯ್ಕೆಗೊಳ್ಳುವ ಅಥವಾ ಈ ಹುದ್ದೆಗಳನ್ನು ಹೊಂದಿರುವ ವ್ಯಕ್ತಿಗಳಿಗೆ ಹಾಗೂ ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಬಹುದಾದ ಇತರ ಹುದ್ದೆಗಳಿಗೆ ಈ ನಿಯಮಗಳು ಅನ್ವಯವಾಗತಕ್ಕದ್ದಲ್ಲ.

**2. ನೇರ ನೇಮಕಾತಿಗೆ ಆಯ್ಕೆ ಪ್ರಕ್ರಿಯೆ:–** ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅಥವಾ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ14)ರಡಿಯಲ್ಲಿ ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ವಿಶೇಷವಾಗಿ ರಚಿಸಿರುವ ಅಥವಾ ರಚಿಸಲಾಗಿದೆ ಎಂದು ಭಾವಿಸಲಾದ, ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಯಾವುದೇ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಯು, ನಿಯಮ 1ರ ಉಪನಿಯಮ (3)ರಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳನ್ನು ಹೊರತುಪಡಿಸಿ, ಸರ್ಕಾರವು ನಿಗದಿಪಡಿಸಿರುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಶೇಕಡ 60 ಅಂಕಗಳಿಗೆ ಕಡಿಮೆ ಇಲ್ಲದಂತೆ ಪಡೆದು ಆಯ್ಕೆಯಾದ ಮೂರು ತಿಂಗಳೊಳಗೆ ಪಾಸು ಮಾಡದಿದ್ದಲ್ಲಿ, ಅಂತಹ ಅಭ್ಯರ್ಥಿಯನ್ನು ನೇಮಕ ಮಾಡತಕ್ಕದ್ದಲ್ಲ. ಅಂತಹ ಪರೀಕ್ಷೆಯನ್ನು ಸರ್ಕಾರ ಅಥವಾ ಅದು ಅನುಮೋದಿಸಿದ ಏಜೆನ್ಸಿಯು ನಡೆಸತಕ್ಕದ್ದು.

**3. ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ ಅನ್ವಯಿಸುವುದು:–1.** ಪ್ರತಿಯೊಬ್ಬ ಸರ್ಕಾರಿ ನೌಕರನು, ನಿಯಮ 1ರ ಉಪ ನಿಯಮ (3)ರಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳಲ್ಲಿರುವವರನ್ನು ಹೊರತುಪಡಿಸಿ, ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಗೆ ಹಾಜರಾಗಿ ಶೇಕಡ 35ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಗಳಿಸಿ ಪಾಸು ಮಾಡುವುದು ಕಡ್ಡಾಯ ಮಾಡತಕ್ಕದ್ದು. ಈ ಪರೀಕ್ಷೆಯನ್ನು ಸರ್ಕಾರ ಅಥವಾ ಅದು ಅನುಮೋದಿಸಿದ ಏಜನ್ಸಿಯು ನಡೆಸತಕ್ಕದ್ದು. ಯಾವುದೇ ಸರ್ಕಾರಿ ನೌಕರನು, ಈ ನಿಯಮಗಳ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಪರೀಕ್ಷೆಯಲ್ಲಿ ಉತ್ತೀರ್ಣನಾಗದೇ ಇದ್ದಲ್ಲಿ ಮುಂಬಡ್ತಿಗೆ ಅರ್ಹನಾಗತಕ್ಕದ್ದಲ್ಲ. ಯಾವುದೇ ಸರ್ಕಾರಿ ನೌಕರನು ಈ ನಿಯಮಗಳ ಪ್ರಾರಂಭದ ದಿನಾಂಕದಿಂದ ನಾಲ್ಕು ವರ್ಷಗಳ ಅವಧಿಯೊಳಗೆ ಪರೀಕ್ಷೆಯಲ್ಲಿ ಉತ್ತೀರ್ಣನಾಗದೇ ಇದ್ದಲ್ಲಿ ವಾರ್ಷಿಕ ವೇತನ ಬಡ್ತಿ ಗಳಿಸಲು ಅರ್ಹನಾಗತಕ್ಕದ್ದಲ್ಲ.

ಪರಂತು, ಈ ಉಪ–ನಿಯಮದಲ್ಲಿರುವುದಾವುದೂ, ಈ ನಿಯಮಗಳ ಪ್ರಾರಂಭದ ದಿನಾಂಕದಂದು 50 ವರ್ಷಗಳ ವಯಸ್ಸಾಗಿರುವ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕದ್ದಲ್ಲ.

(2) ಯಾವುದೇ ವಾಹನ ಚಾಲಕ ಅಥವಾ ಡಿ ಸಮೂಹದ ನೌಕರನು, ಈ ನಿಯಮಗಳ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣನಾಗದ ಹೊರತು, ಕಿರಿಯ ಸಹಾಯಕ/ದ್ವಿತೀಯದರ್ಜೆ ಸಹಾಯಕ ಅಥವಾ ಸಮಾನ ಅಥವಾ ಉನ್ನತ ಹುದ್ದೆಯ ವೃಂದಕ್ಕೆ ವರ್ಗಾವಣೆಗೆ ಅಥವಾ ಮುಂಬಡ್ತಿಗೆ ಅರ್ಹನಾಗತಕ್ಕದ್ದಲ್ಲ.

(3) ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತಹ 50 ವರ್ಷ ವಯಸ್ಸು ದಾಟಿದ ಸರ್ಕಾರಿ ನೌಕರರನ್ನೂ ಒಳಗೊಂಡಂತೆ ಸೇವಾನಿರತ ನೌಕರರು ಸರ್ಕಾರವು ಅಥವಾ ಸರ್ಕಾರದಿಂದ ಅನುಮೋದಿತ ಏಜೆನ್ಸಿಯು ನೀಡುವ ಪ್ರಮಾಣ ಪತ್ರವನ್ನು ಹಾಜರುಪಡಿಸುವುದಕ್ಕೆ ಒಳಪಟ್ಟು ಅವರುಗಳಿಗೆ ರೂ. 5,000/–ಗಳ (ಐದು ಸಾವಿರ ರೂಪಾಯಿಗಳು) ಪ್ರೋತ್ಸಾಹ ಧನವನ್ನು ಸಂದಾಯ ಮಾಡತಕ್ಕದ್ದು.

(4) ಯಾವುದೇ ವ್ಯಕ್ತಿಯು ನೇರ ನೇಮಕಾತಿ ಸಮಯದಲ್ಲಾಗಲೀ ಅಥವಾ ಸೇವಾನಿರತ ಅಭ್ಯರ್ಥಿಯಾಗಲಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಒಂದು ಸಲ ಉತ್ತೀರ್ಣನಾದಲ್ಲಿ, ಈ ನಿಯಮದಡಿ ಯಾವುದೇ ಉದ್ದೇಶಕ್ಕಾಗಿ ಮತ್ತೊಮ್ಮೆ ಇದೇ ಪರೀಕ್ಷೆಯಲ್ಲಿ ಉತ್ತೀರ್ಣನಾಗುವ ಅವಶ್ಯಕತೆಯಿಲ್ಲ.

(5) ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಗೆ ಪಠ್ಯಕ್ರಮ:- ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಗೆ ಪಠ್ಯಕ್ರಮವು, ಸರ್ಕಾರವು ಅಧಿಸೂಚಿಸಬಹುದಾದಂತ ಸಂಖ್ಯೆಯ ಪತ್ರಿಕೆಗಳು, ಅಂತಹ ಪರೀಕ್ಷೆ ಪತ್ರಿಕೆಗೆ ಅವಧಿ, ಗರಿಷ್ಠ ಅಂಕಗಳನ್ನು ಒಳಗೊಂಡಿರತಕ್ಕದ್ದು. ಪಠ್ಯಕ್ರಮವನ್ನು ವೆಬ್‌ಸೈಟ್ ನಲ್ಲಿಯೂ ಸಹ ಪ್ರಕಟಿಸತಕ್ಕದ್ದು.

ಈ ಸರ್ಕಾರದ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ 21.10.2013ರಂದು ನಡೆದ ಸಭೆಯ ನಡವಳಿಕೆಯ ವಿಷಯ ಸಂಖ್ಯೆ ಸಿಅಸುಸ್ಥಾಸ/07/2013.14 ರನ್ವಯ ಮಾನ್ಯ ಆಯುಕ್ತರವರನ್ನು ಕೋರಲು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ.

ಮುಂದುವರೆದು ಸರ್ಕಾರವು ಅಧಿಸೂಚನೆ ಹೊರಡಿಸಿ ಕರ್ನಾಟಕ ಸಿವಿಲ್ ಸೇವಾ(ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು,2012 ಇದನ್ನು ತಿದ್ದುಪಡಿ ಮಾಡಿ ಈ ಕೆಳಕಂಡಂತೆ ನಿಯಮಗಳನ್ನು ರಚಿಸಿರುತ್ತದೆ.

1. **ಶೀರ್ಷಿಕೆ ಮತ್ತು ಪ್ರಾರಂಭ** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) (ತಿದ್ದುಪಡಿ) ನಿಯಮಗಳು,2012 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ದಿನಾಂಕ 22.03.2012ರಿಂದ (ಮುಖ್ಯ ನಿಯಮಗಳು ಜಾರಿಗೆ ಬಂದ ದಿನಾಂಕ) ಜಾರಿಗೆ ಬಂದಿದೆಯೆಂದು ಭಾವಿಸತಕ್ಕದ್ದು.

2. **ನಿಯಮ 2ಕ್ಕೆ ತಿದ್ದುಪಡಿ:** ಕರ್ನಾಟಕ ಸಿವಿಲ್ ಸೇವಾ(ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು,2012ರ ನಿಯಮ 2 ರ ಬದಲು ಈ ಕೆಳಕಂಡದ್ದನ್ನು ಪ್ರತಿಸ್ಥಾಪಿಸತಕ್ಕದ್ದು ಅಂದರೆ:-

"(2) **ನೇರ ನೇಮಕಾತಿಯಾದ ಅಭ್ಯರ್ಥಿಗಳಿಗೆ ಅನ್ವಯಿಸುವಿಕೆ :** ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ ) ನಿಯಮಗಳು,1977 ಅಥವಾ ವಿಶೇಷವಾಗಿ ರಚಿಸಲಾದ ನೇಮಕಾತಿ ನಿಯಮಗಳು ಅಥವಾ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978( 1990ರ ಕರ್ನಾಟಕ ಅಧಿನಿಯಮ 14)ರಡಿಯಲ್ಲಿ ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ರಚಿಸಲಾದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಈ ನಿಯಮಗಳ ನಿಯಮ1ರ ಉಪನಿಯಮ(3)ರಲ್ಲಿ ನಿರ್ದಿಷ್ಟಪಡಿಸಲಾಗಿರುವ ಹುದ್ದೆಗಳನ್ನು ಹೊರತುಪಡಿಸಿ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ಹುದ್ದೆಗೆ ನೇರ ನೇಮಕಾತಿಯ ಮುಖಾಂತರ ನೇಮಕಾತಿ ಹೊಂದಿದ ನೌಕರನು/ಳು ಸರ್ಕಾರ ನಿಗದಿಪಡಿಸಬಹುದಾದ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಅವರ ಪರಿವೀಕ್ಷಣಾವಧಿಯಲ್ಲಿ ಪಾಸು ಮಾಡತಕ್ಕದ್ದು ಮತ್ತು ಆ ಪರೀಕ್ಷೆಯನ್ನು ಪಾಸು ಮಾಡದ ಹೊರತು ಅವರ ಪರಿವೀಕ್ಷಣಾವಧಿಯನ್ನು ಘೋಷಿಸತಕ್ಕದ್ದಲ್ಲ. ಈ ಪರೀಕ್ಷೆಯನ್ನು ಸರ್ಕಾರವು ಅಥವಾ ಸರ್ಕಾರದಿಂದ ಅನುಮೋದಿಸಲ್ಪಟ್ಟ ಸಂಸ್ಥೆಯು ನಡೆಸತಕ್ಕದ್ದು."

ಆದುದರಿಂದ ಮೇಲ್ಕಂಡ ಸರ್ಕಾರದ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಕಡತ ಸಂಖ್ಯೆ:ಬಿ12(5ಜಿ)ಪಿಆರ್/169/2013-14 ರಲ್ಲಿ ಆಯುಕ್ತರು ಮಂಡಿಸಿರುವ ದಿನಾಂಕ:30-12-2013 ರ ಟಿಪ್ಪಣಿ.

**<u>ನಿರ್ಣಯ:</u> ಆಯುಕ್ತರ ದಿನಾಂಕ:30-12-2013 ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

---

**ವಿಷಯ ಸಂಖ್ಯೆ: ಸಿಆಸುಸ್ಥಾಸ/15/2013-14**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ನಡವಳಿಯಲ್ಲಿ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) (ತಿದ್ದುಪಡಿ) ನಿಯಮಗಳು 2012ನ್ನು ಈ ಕೆಳಕಂಡ ಪ್ರಸ್ತಾವನೆ ಮತ್ತು ಆದೇಶದಂತೆ ರದ್ದುಗೊಳಿಸಿರುತ್ತದೆ. ಸರ್ಕಾರಿ ಸೇವೆಯಲ್ಲಿರುವ ನೌಕರರು ಮೃತರಾದಲ್ಲಿ ಅವರ ಅವಲಂಬಿತರಲ್ಲೊಬ್ಬರಿಗೆ ಅನುಕಂಪದ ಆಧಾರದ ನೇಮಕಾತಿಯನ್ನು ನೀಡುವ ಬಗ್ಗೆ ಕರ್ನಾಟಕ ಸಿವಿಲ್ ಸೇವೆ(ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 100 ಎಸ್‌ಸಿಎ 95 ದಿನಾಂಕ 12.09.96ರ ಅಧಿಸೂಚನೆಯ ಮೂಲಕ ಹೊರಡಿಸಲಾಗಿದೆ.

ಸರ್ಕಾರಿ ನೌಕರರು ಸಾರ್ವಜನಿಕ ಸೇವೆಯ ಕರ್ತವ್ಯದ ಮೇಲೆ ಇರುವಾಗ ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥರಾದ ಪ್ರಕರಣಗಳಲ್ಲಿ ಅವರ ಅವಲಂಬಿತರಿಗೆ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರದ ಆಧಾರದ ಮೇಲೆ ನೇಮಿಸಬಹುದೆಂದು ಸರ್ಕಾರವು ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011, ದಿನಾಂಕ 13.10.2011ರಲ್ಲಿ, ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 100 ಎಸ್‌ಸಿಎ 95 ದಿನಾಂಕ 12.09.96ರಲ್ಲಿ ಸೂಚಿಸಿರುವ ನಿಯಮಗಳಿಗೆ ತಿದ್ದುಪಡಿ ಮಾಡಲಾಯಿತು.

ಕರ್ನಾಟಕ ಸಿವಿಲ್ ಸೇವಾ(ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ಕ್ಕೆ ತಿದ್ದುಪಡಿ ಮಾಡಲು ಕನಾಟಕ ಸಿವಿಲ್ ಸೇವಾ(ಅನುಕಂಪದ ಆಧಾರದ ಮೇಲೆ ನೇಮಕಾತಿ) (ತಿದ್ದುಪಡಿ) ಕರಡು ನಿಯಮಗಳು 2012ನ್ನು ದಿನಾಂಕ 27.12.2012ರ ಅಧಿಸೂಚನೆ ಸಂಖ್ಯೆ ಸಿಆಸುಇ 46 ಸೇಅನೇ 2012ರಲ್ಲಿ ಹೊರಡಿಸಿ ಅಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಇದು ಇನ್ನೂ ಅಂತಿಮವಾಗಿಲ್ಲ.

ಸರ್ಕಾರಿ ನೌಕರರು ತಮ್ಮ ಹುದ್ದೆಗೆ ಸಂಬಂಧಿಸಿದ ಕರ್ತವ್ಯವನ್ನು ನಿರ್ವಹಿಸುವಾಗ ಸಂಭವಿಸುವ ಅಪಘಾತದಿಂದ ಅಥವಾ ಕ್ಷತಿಯಿಂದ ದೈಹಿಕವಾಗಿ ಅಥವಾ ಮಾನಸಿಕವಾಗಿ ಶಾಶ್ವತವಾಗಿ ಅಸಮರ್ಥರಾದವರಿಗೆ ಪ್ರೋತ್ಸಾಹ ಅಥವಾ ರಿಯಾಯಿತಿ ನೀಡುವುದು 2011ರಂದು ಹೊರಡಿಸಿದ ತಿದ್ದುಪಡಿಯ ಉದ್ದೇಶವಾಗಿತ್ತು. ಈ ಅಸಮರ್ಥತೆಯ ಸಾರ್ವಜನಿಕ ಸೇವೆಯ ಮೇಲೆ ಅದರಲ್ಲೂ ಕರ್ತವ್ಯ ನಿರ್ವಹಿಸುವಾಗ ಸಂಭವಿಸುವ ಕಾರಣದಿಂದ ಉಂಟಾಗಿರಬೇಕು. ವಯಸ್ಸಿಗೆ ಅನುಗುಣವಾಗಿ ಬರುವ ಕಾಯಿಲೆಗಳಿಂದ/ಇತರೆ ಕಾಯಿಲೆಗಳಿಂದ ಕರ್ತವ್ಯದ ಮೇಲಿಲ್ಲದಿರುವಾಗ ಉಂಟಾಗುವ ಅಪಘಾತದಿಂದ ಉಂಟಾಗುವ ಅಸಮರ್ಥತೆಯ ಆಧಾರದ ಮೇಲೆ ಸರ್ಕಾರಿ ನೌಕರರ ಅವಲಂಬಿತರಿಗೆ ನೌಕರಿ ನೀಡುವುದು ಇದರ ಉದ್ದೇಶವಲ್ಲ. ನಕ್ಸಲ್ ಕಾರ್ಯಾಚರಣೆಯಲ್ಲಿ ಶಾಶ್ವತವಾಗಿ ಅಂಗವಿಕಲನಾದ ಪೋಲಿಸ್ ಪೇದೆಯ ಕುಟುಂಬಕ್ಕೆ ಸೌಲಭ್ಯ ನೀಡುವ ಉದ್ದೇಶದಿಂದ ಮೂಲತವಾಗಿ ಈ ನಿಯಮಗಳನ್ನು ರೂಪಿಸಲಾಯಿತು.

ಆದರೆ ಈ ಆಧಿಸೂಚನೆಯ ಆಧಾರದ ಮೇಲೆ ಅನೇಕ ಸರ್ಕಾರಿ ನೌಕರರನ್ನು ಅವರು ನಿವೃತ್ತರಾಗುವ ಸ್ವಲ್ಪ ಸಮಯದ ಮುಂಚೆ ಸಾಮಾನ್ಯ ಸ್ವರೂಪದ ಕಾಯಿಲೆಗಳಾದ ಡಯಾಬಿಟಿಸ್, ರಕ್ತದೊತ್ತಡ ಇತ್ಯಾದಿ ಕಾಯಿಲೆಗಳ ನೆಪವೊಡ್ಡಿ ಅನುಮತಿ ನೀಡುತ್ತಿರುವುದನ್ನು ಮತ್ತು ಅವರ ಅವಲಂಬಿತರೊಬ್ಬರಿಗೆ ಅನುಕಂಪದ ಅಧಾರದ ನೇಮಕಾತಿ ನೀಡುವ ಅರ್ಜಿಗಳನ್ನು ಪರಿಗಣಿಸುತ್ತಿರುವುದನ್ನು ಗಮನಿಸಲಾಗಿದೆ. ಇದರಿಂದ ಅನರ್ಹ ವ್ಯಕ್ತಿಗಳು ಒಂದು ರೀತಿ ಸರ್ಕಾರಿ ನೌಕರಿಯನ್ನು ಅನುವಂಶಿಕ ಸ್ವರೂಪ/ಆಧಾರದ ಮೇಲೆ ಪಡೆಯುತ್ತಿದ್ದು ಸಾಮಾನ್ಯ ಸಾರ್ವಜನಿಕರು ಸರ್ಕಾರಿ ನೌಕರಿಯನ್ನು ಪಡೆಯುವ ಅವಕಾಶವನ್ನು ಮೊಟಕುಗೊಳಿಸಿದಂತಾಗುತ್ತದೆ. ಮುಂದುವರಿದು ಶ್ರೀ ಹಾರನಹಳ್ಳಿ ರಾಮಸ್ವಾಮಿಯವರ ನೇತೃತ್ವದಲ್ಲಿದ್ದ ಆಡಳಿತ ಸುಧಾರಣಾ ಆಯೋಗವೂ ಸರ್ಕಾರಿ ನೌಕರರು ಸೇವೆಯಲ್ಲಿದ್ದಾಗ ಮೃತಪಟ್ಟರೆ ಅವರ ಅವಲಂಬಿತರಿಗೆ ಅನುಕಂಪದ ಆಧಾರದ ನೌಕರಿ ನೀಡುವ ಬದಲು ಕೆಲವು ನೀವೃತ್ತಿ ಸೌಲಭ್ಯಗಳನ್ನು ನೀಡುವುದು ಒಳಿತೆಂದು ಶಿಫಾರಸ್ಸು ಮಾಡಿತ್ತು.

ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ತನ್ನ ಹಕ್ಕು ಎಂಬುದಾಗಿ ಕ್ಲೇಮು ಮಾಡತಕ್ಕದ್ದಲ್ಲ ಮತ್ತು ಯಥಾಕ್ರಮದಲ್ಲಿ ನೀಡುವಂತಹುದು ಎಂಬಂತೆ ನೀಡತಕ್ಕದ್ದಲ್ಲ ಎಂದು ಕರ್ನಾಟಕ ಸಿವಿಲ್ ಸೇವಾ(ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ರ ನಿಯಮ3(1)ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಸರ್ಕಾರಿ ನೌಕರನ ಮರಣದಿಂದ ಆತನ ಕುಟುಂಬಕ್ಕೆ ಉಂಟಾಗುವ ನಷ್ಟ ಮತ್ತು ನಿರಾಶ್ರಿತತೆಯನ್ನು ತಡೆಯುವುದು ಅನುಕಂಪದ ಆಧಾರದ ನೇಮಕಾತಿ ನೀಡುವ ಉದ್ದೇಶವಾಗಿದೆ.

ಮುಂದುವರೆದು, ಭಾರತದ ಸರ್ವೋಚ್ಚ ನ್ಯಾಯಾಲಯದ 5 ಸದಸ್ಯರ ಸಂವಿಧಾನ ಪೀಠವು ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ದಿನಾಂಕ 10.04.2006ರಂದು ನೀಡಿದ ತೀರ್ಪಿನಲ್ಲಿ ಸಿವಿಲ್ ಸೇವೆಗಳ ಎಲ್ಲ ಹುದ್ದೆಗಳಿಗೆ ನೇರ ನೇಮಕಾತಿಯನ್ನು ಸದರಿ ಹುದ್ದೆಗಳಿಗೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇಮಕಾತಿ ವಿಧಾನವನ್ನು ಅನುಸರಿಸಿಯೇ ಎಲ್ಲ ಸಾರ್ವಜನಿಕರಿಗೆ ಅವಕಾಶ ನೀಡುವ ಮೂಲಕವೇ ಮಾಡಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದೆ. ಈ ತೀರ್ಪು ಈ ನೆಲದ ಕಾನೂನಾಗಿದೆ ಮತ್ತು ಅನರ್ಹ ವ್ಯಕ್ತಿಗಳು ವಂಶ ಪಾರಂಪರ್ಯವಾಗಿ ಸರ್ಕಾರಿ ಸೇವೆಗೆ ಸೇರುವುದು ಮೇಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ತಿಳಿಸಿರುವ ನೀತಿಗೆ ವಿರುದ್ಧವಾಗಿರುವುದರಿಂದ ಅದನ್ನು ತಡೆಗಟ್ಟಬೇಕಾಗಿರುತ್ತದೆ. ಈಗ ಚಾಲ್ತಿಯಲ್ಲಿರುವ ನಿಯಮಗಳು ದುರುಪಯೋಗವಾಗುತ್ತಿರುವುದರಿಂದ ಸರ್ಕಾರವು ಉದ್ದೇಶಿತ ಫಲಾನುಭವಿಗಳಿಗೆ ಮಾತ್ರ ಇದರ ಪ್ರಯೋಜನವಾಗುವಂತೆ ನಿಯಮಗಳನ್ನು ಪರಿಷ್ಕರಿಸಲು ಕ್ರಮಕೈಗೊಳ್ಳುತ್ತಿದೆ. ಆದುದರಿಂದ .ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011, ದಿನಾಂಕ 13.10.2011ಯನ್ನು ಮುಂದಿನ ತಿದ್ದುಪಡಿಯಾಗುವವರೆಗೆ ಹಿಂಪಡೆಯಬೇಕಾಗಿದೆ ಮತ್ತು ಅದರ ಚಾಲ್ತಿ ಸಮಯದಲ್ಲಿ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಮಾತ್ರ ಈ ನಿಯಮಗಳು ಸೀಮಿತವಾಗಿವೆ.

## <u>ಆದೇಶ</u>

**ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಅಧಿಸೂಚನೆ ಸಂಖ್ಯೆ ಸಿಅಸುಇ 78 ಸೇಅನೇ 2011 ದಿನಾಂಕ 13.10.2011 ರನ್ವಯ ಹೊರಡಿಸಿದ ಕರ್ನಾಟಕ ಸಿವಿಲ್ ಸೇವಾ(ಅನುಕಂಪದ ಆಧಾರದ ಮೇಲೆ ನೇಮಕಾತಿ)ನಿಯಮಗಳು 2011ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.**

**ಮುಂದುವರೆದು, ಈ ದಿನಾಂಕದಂದು ಬಾಕಿ ಇದ್ದ ಪ್ರಕರಣಗಳಲ್ಲಿ ಅಸಮರ್ಥತೆ ಮತ್ತು ಹಾನಿಯು ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಉಂಟಾಗಿರುವ ಪ್ರಕರಣಗಳಲ್ಲಿ ಮಾತ್ರ ಹಾಗೂ ಅನುಕಂಪದ ಆಧಾರದ**

**ನೇಮಕಾತಿಯನ್ನು ಹಕ್ಕೆಂದು ಕ್ಲೇಮು ಮಾಡತಕ್ಕದ್ದಲ್ಲವಾದ್ದರಿಂಂದ ನೇಮಕಾತಿ ಪ್ರಾಧಿಕಾರಗಳು ಈ ನಿಯಮದಡಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಪ್ರತಿ ಪ್ರಕರಣದಲ್ಲೂ ಸಚಿವಾಲಯದ ಆಡಳಿತ ಇಲಾಖೆಗಳ ಮೂಲಕ ಮೇಲೆ ಸೂಚಿಸಿರುವಂತೆ ಪರಿಶೀಲಿಸಿ ನೌಕರರ ಸೇವೆಯನ್ನು ಇತರೆ ಹುದ್ದೆಗಳಲ್ಲಿ ಬಳಸುವುದು ಸಾಧ್ಯವಿಲ್ಲವೆಂದು ಖಚಿತಪಡಿಸಿಕೊಂಡ ನಂತರವೇ ಸಿಬ್ಬಂದಿ ಮತ್ತು ಆಡಳಿತ ಸುದಾರಣೆ ಇಲಾಖೆ(ಸೇವಾ ನಿಯಮ) ದ ಅಭಿಪ್ರಾಯ ಪಡೆದು ಕ್ರಮ ಕೈಗೊಳ್ಳಬೇಕೆಂದು ಸರ್ಕಾರದ ನಡವಳಿಯಲ್ಲಿ ತಿಳಿಸಿದೆ.**

ಈ ಹಿಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಸಭೆಯ ದಿನಾಂಕ 07.10.2013ರ ನಡವಳಿಯಲ್ಲಿ (ವಿಷಯ ಸಂಖ್ಯೆ : ಸಿಆಸುಸ್ಥಾಸ/29/2011.12) ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸಂಬಂಧ ಹೊರಡಿಸಿರುವ .ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011, ದಿನಾಂಕ 13.10.2011ನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಒಪ್ಪಿರುತ್ತದೆ.

ಅಲ್ಲದೆ, ದಿನಾಂಕ 28.10.2013ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಯಲ್ಲಿ (ವಿಷಯದ ಸಂಖ್ಯೆ: 01(87)/2013.14) ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸಂಬಂಧ ಹೊರಡಿಸಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011, ದಿನಾಂಕ 13.10.2011ನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಒಪ್ಪಿರುವ .ದಿನಾಂಕ 07.10.2013ರ ನಿರ್ಣಯವನ್ನು ಒಪ್ಪಿರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ್ದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸಂಬಂಧ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011, ದಿನಾಂಕ 13.10.2011 ರನ್ವಯ ಹೊರಡಿಸಿರುವ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 2011ನ್ನು ಹಿಂಪಡೆದು, ಕರ್ನಾಟಕ ಸಿವಿಲ್ ಸೇವಾ(ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ಕ್ಕೆ ತಿದ್ದುಪಡಿ ಮಾಡಲು ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ)(ತಿದ್ದುಪಡಿ) ನಿಯಮಗಳು 2012ನ್ನು ರದ್ದುಗೊಳಿಸಿರುವ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ನಡವಳಿ ಆದೇಶದ ಸಂಖ್ಯೆ ಸಿಆಸುಇ 46 ಸೇಅನೇ 2012, ಬೆಂಗಳೂರು ದಿನಾಂಕ 25.10.2013 ನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಕಡತ ಸಂಖ್ಯೆ:ಬಿ12(5ಜಿ)ಪಿಆರ್/248/2011-12 ರಲ್ಲಿ ಆಯುಕ್ತರು ಮಂಡಿಸಿರುವ ದಿನಾಂಕ:24-01-2014 ರ ಟಿಪ್ಪಣಿ.

**<u>ನಿರ್ಣಯ:</u> ಆಯುಕ್ತರ ದಿನಾಂಕ:24-01-2014 ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

---

**ವಿಷಯ ಸಂಖ್ಯೆ: ಸಿಆಸುಸ್ಥಾಸ/16/2013-14**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ದಿನಾಂಕ: 18-03-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ: 1 (245) 2010-11 ರಂತೆ

ಪಾಲಿಕೆಯ ಕೆಲಸ ಕಾರ್ಯಗಳ ನಿರ್ವಹಣೆಗೆ ಅಗತ್ಯವಿರುವ ಕೆಳಕಂಡ 37 ಮಾಹಿತಿ ತಂತ್ರಜ್ಞಾನ ಸಿಬ್ಬಂದಿಗಳ ಸೇವೆಯನ್ನು ಟೆಂಡರ್ ಕರೆದು ಪಡೆದುಕೊಳ್ಳಲು ನಿರ್ಣಯಿಸಲಾಗಿರುತ್ತದೆ.

| Sl No. | Designation | No. of Posts |
|---|---|---|
| 1. | Datacenter Manager/ Project Manager | 02 |
| 2. | Network Engineer | 02 |
| 3. | Server /Database Administrator | 02 |
| 4. | Senior Software Engineer/ Application Support Engineer | 03 |
| 5. | Software Engineer | 06 |
| 6. | System & Network Support Engineer | 20 |
| 7. | IT Co-ordinator | 02 |
| | **Total** | 37 |

ಆದರೆ ಪ್ರಸ್ತುತ ಸೇವೆಯನ್ನು ನೀಡುತ್ತಿರುವ ಕಿಯೋನಿಕ್ಸ್ ಸಂಸ್ಥೆಯ 4ಜಿ ವಿನಾಯಿತಿಯು ಹಠಾತ್ತಾಗಿ ಸರ್ಕಾರದಿಂದ ರದ್ದುಗೊಂಡಿರುವುದರಿಂದ ಹಾಗೂ 31–12–2013 ರಂದು ಗುತ್ತಿಗೆ ಅವಧಿಯು ಮುಕ್ತಾಯಗೊಂಡಿದ್ದು, ಪಾಲಿಕೆಗೆ ಮಾಹಿತಿ ತಂತ್ರಜ್ಞಾನ ಸಿಬ್ಬಂದಿಗಳ ಸೇವೆ ಅತ್ಯಗತ್ಯವಾಗಿರುವ ಮೇರೆಗೆ ದಿನಾಂಕ:15–06–2013 ರಂದು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಈ ಕೆಳಕಂಡ 05 ಸಂಸ್ಥೆಗಳ ಟೆಂಡರುದಾರರು ಭಾಗವಹಿಸಿರುತ್ತಾರೆ.

1. M/s ALACKRITY CONSOLS PVT LTD,
2. M/s RMS TECHNOLOGIES PVT LTD,
3. M/s CMS INFOSYSTEMS PVT LTD,
4. M/s STRATEGIC OUTSOURCING SERVICES PVT LTD &
5. M/s CRYSTAL INFOSYSTEMS AND SERVICES

ಟಿ.ವಿ.ಸಿ.ಸಿ ವಿಭಾಗದವರು ಸದರಿ ಟೆಂಡರ್‌ದಾರರು ಸಲ್ಲಿಸಿರುವ ಇ–ಪ್ರಕ್ಯೂರ್‌ಮೆಂಟ್ ದಾಖಲಾತಿಗಳನ್ನು ಪರಿಶೀಲಿಸಿ ಭಾಗವಹಿಸಿರುವ ಎಲ್ಲಾ ಸಂಸ್ಥೆದಾರರು ತಾಂತ್ರಿಕವಾಗಿ ಅರ್ಹರಾಗಿರುವುದಿಲ್ಲವೆಂದು ಅಭಿಪ್ರಾಯಿಸಿರುವ ಮೇರೆಗೆ ತಾಂತ್ರಿಕ ಬಿಡ್ಡಗಳನ್ನು ಅನರ್ಹಗೊಳಿಸಿ, ಮತ್ತೊಮ್ಮೆ ಅಲ್ಪಾವಧಿ ಟೆಂಡರ್ ಅನ್ನು ದಿನಾಂಕ: 19–09–2013 ರಂದು ಕರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಈ ಕೆಳಕಂಡ ನಾಲ್ಕು ಸಂಸ್ಥೆಗಳು ಭಾಗವಹಿಸಿರುತ್ತಾರೆ.

1. M/s Strategic Outsourcing Services Pvt Ltd
2. M/s Crystal Infosystems and Services
3. M/s Allied Digital Services Pvt Ltd
4. M/s RMS Technologies Pvt Ltd

ಮೇಲ್ಕಂಡ 04 ಸಂಸ್ಥೆಗಳು ಅರ್ಹರಾಗಿದ್ದು, ಆರ್ಥಿಕ ಬಿಡ್ ದರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ನಮೂದಿಸಿರುವ ಬಿಡ್ ಮೊತ್ತ |
|---|---|---|
| 1. | M/s Strategic Outsourcing Services Pvt Ltd | 10,39,638/- |
| 2. | M/s Crystal Infosystems and Services | 10,70,658/- |
| 3. | M/s Allied Digital Services Pvt Ltd | 11,85,724/- |
| 4. | M/s RMS Technologies Pvt Ltd | 9,61,347/- |

ಮೇಲ್ಕಂಡ ದರಗಳಂತೆ M/s RMS Technologies Pvt Ltd ರವರು ಅತ್ಯಂತ ಕಡಿಮೆ ಬಿಡ್ ಮೊತ್ತ ರೂ.9,61,347/–ಗಳನ್ನು ನಮೂದಿಸಿರುವುದರಿಂದ, ಸದರಿ ಸಂಸ್ಥೆಯನ್ನು ಮಾನ್ಯ ಆಯುಕ್ತರ ಅನುಮೋದನೆಯನ್ನು ಪಡೆದು ದರ ಸಂಧಾನ ಸಮಿತಿಯ ಸಭೆಗೆ ದಿನಾಂಕ: 13–12–2013 ರಂದು ಕರೆದು ಚರ್ಚಿಸಿ ಪರಿಷ್ಕೃತ ಬಿಡ್ ಮೊತ್ತ ರೂ. 9,57,696/– ಗಳನ್ನು ನಮೂದಿಸಿರುತ್ತಾರೆ. ಸದರಿ ಸಂಸ್ಥೆಯವರು ಇದಕ್ಕೆ ತಮ್ಮ ಅನುಮತಿ ಮತ್ತು ಒಪ್ಪಿಗೆ ಪತ್ರವನ್ನು ನೀಡಿರುತ್ತಾರೆ. ಮುಂದುವರೆದು ಸದರಿ ಸಂಸ್ಥೆಯವರು ನಮೂದಿಸಿರುವ ಸರ್ವಿಸ್ ಚಾರ್ಜ್ ಮೊತ್ತ ಹೆಚ್ಚಾಗಿರುವುದರಿಂದ ಮತ್ತೊಮ್ಮೆ ದಿನಾಂಕ:06–01–2014 ರಂದು 2ನೇ ಬಾರಿ ದರ ಸಂಧಾನ ನಡೆಸಲಾಗಿರುತ್ತದೆ. ಅದರಂತೆ M/s RMS Technologies Pvt Ltd ರವರು ದರ ಸಂಧಾನದ ನಂತರ ಅಂತಿಮವಾಗಿ ಸಲ್ಲಿಸಿರುವ ಮೊತ್ತದ ವಿವರ ಕೆಳಕಂಡಂತಿರುತ್ತದೆ.

| Sl. No | Designation | Salary Component/Month at prevailing market rates | | | | | EPF (ER) | Service charges | Total G=D+E+F | No. of posts (h) | Grand toal I=G*H |
|---|---|---|---|---|---|---|---|---|---|---|---|
| | | Basic | Allowance | PF @ 12% | ESI | Total Salary D=A+B+C | | | | | |
| | | A | B | C | | D | E | F | G | H | I |
| 1 | Datacenter Manager/ Project Manager | 19200 | 10496 | 2304 | NILL | 32000 | 2611 | 5192 | 39803 | 2 | 79606 |
| 2 | Network Engineer | 13200 | 7216 | 1584 | NILL | 22000 | 1795 | 3569 | 27364 | 2 | 54729 |
| 3 | Server / Database Administrator | 16200 | 8856 | 1944 | NILL | 27000 | 2203 | 4380 | 33584 | 2 | 67167 |
| 4 | Senior Software Engineer/Aplication Support Engineer | 12600 | 6888 | 1512 | NILL | 21000 | 1714 | 3407 | 26121 | 3 | 78362 |

| | | | | | | | | | | | |
|---|---|---|---|---|---|---|---|---|---|---|---|
| 5 | IT Co-ordinator | 14700 | 8036 | 1764 | NILL | 24500 | 1999 | 3975 | 30474 | 2 | 60948 |
| 6 | Software Engineer | 9720 | 5314 | 1166.4 | NILL | 16200 | 1322 | 2628 | 20150 | 6 | 120901 |
| 7 | System & Network Support Engineer | 9780 | 5346 | 1173.6 | NILL | 16300 | 1330 | 2645 | 20275 | 20 | 405492 |
| | TOTAL | | | | | | | | | | **8,67,205/-** |
| (Rupees Eight lakhs Sixty seven thousand Two hundred Five only) | | | | | | | | | | | |

ಮಾಹಿತಿ ತಂತ್ರಜ್ಞಾನ ಸಿಬ್ಬಂದಿಗಳ ಸೇವೆಯನ್ನು 24 ತಿಂಗಳಿಗೆ (02 ವರ್ಷಕ್ಕೆ) ಪಡೆಯಲು ಒಟ್ಟು ವೆಚ್ಚ ರೂ 2,33,85,397/- (ರೂ ಎರಡು ಕೋಟಿ ಮೂವತ್ತಮೂರು ಲಕ್ಷ ಎಂಭತ್ತೈದು ಸಾವಿರದ ಮುನ್ನೂರ ತೊಂಭತ್ತೇಳು) ಗಳಾಗಿರುತ್ತವೆ. (ಸದರಿ ವೆಚ್ಚದಲ್ಲಿ ಸೇವಾ ತೆರಿಗೆಯಾದ 12.36% ಸಹ ಒಳಗೊಂಡಿರುತ್ತದೆ)

ಮೇಲೆ ತಿಳಿಸಿರುವ ವಿವರಗಳಲ್ಲಿ ದರ ಸಂಧಾನವನ್ನು ಮಾಡಲು ಪ್ರಮುಖವಾಗಿ ಎರಡು ಅಂಶಗಳನ್ನು ಪರಿಗಣಿಸಲಾಗಿದೆ. ಮೊದಲನೇ ಅಂಶದಲ್ಲಿ **ಪ್ರಸ್ತುತ ಸಿಬ್ಬಂದಿಗೆ ನೀಡುತ್ತಿರುವ ವೇತನವನ್ನು ಉಳಿಸಿಕೊಳ್ಳುವುದು** ಹಾಗೂ ಎರಡನೇ ಅಂಶದಲ್ಲಿ **ಸಾಧ್ಯವಾದಷ್ಟು ಮಟ್ಟಿಗೆ ಸೇವಾ ಶುಲ್ಕ (service charge) ಉಳಿತಾಯ ಮಾಡುವುದು**. ಸದರಿ ಅಂಶಗಳನ್ನು ಆಧರಿಸಿ ದರ ಸಂಧಾನ ಕಾರ್ಯವನ್ನು ನಿರ್ವಹಿಸಲಾಗಿರುತ್ತದೆ. ಇದರ ಫಲಶ್ರುತಿಯಾಗಿ ಸಿಬ್ಬಂದಿಗಳ ಹಾಲಿ ವೇತನ ಮಟ್ಟನ್ನು ಬಹುತೇಕ ಉಳಿಸಿಕೊಂಡಂತಾಗಿರುತ್ತದೆ ಹಾಗೂ ಪರಿಷ್ಕೃತ ದರಗಳು ಮೇಲ್ಕಂಡ ಕೋಷ್ಟಕದಲ್ಲಿರುವಂತೆ ಜಾರಿಗೆ ಬರುತ್ತವೆ. ಈ ಕಾರ್ಯದಿಂದ ಪಾಲಿಕೆ ಹಾಗೂ ಸಿಬ್ಬಂದಿಯ ಹಿತದೃಷ್ಟಿಯನ್ನು ಗಮನಾರ್ಹವಾಗಿ ಕಾಪಾಡಿಕೊಳ್ಳಲಾಗಿದೆ.

ಮೇಲ್ಕಂಡ ಎಲ್ಲಾ ಅಂಶಗಳೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸ ಕಾರ್ಯಗಳ ಸುಸೂತ್ರ ನಿರ್ವಹಣೆಯ ದೃಷ್ಟಿಯಿಂದ ಮಾಹಿತಿ ತಂತ್ರಜ್ಞಾನ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಅತ್ಯಂತ ತ್ವರಿತಗತಿಯಲ್ಲಿ ಕ್ರಮ ಜರುಗಿಸಬೇಕಾಗಿರುವುದರಿಂದ ಟೆಂಡರ್ ಅನುಮೋದನೆ ಪಡೆಯಲು ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಕಡತ ಸಂಖ್ಯೆ:ಬಿ12(1ಎ)ಪಿಆರ್/39/2008-09/11-12 ರಲ್ಲಿ ಆಯುಕ್ತರು ಮಂಡಿಸಿರುವ ದಿನಾಂಕ: 22-01-2014 ರ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ:22-01-2014 ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

**ಲಕ್ಷ್ಮೀಕಾಂತ ರೆಡ್ಡಿ**

**ಅಧ್ಯಕ್ಷರು,**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ**

**ಪ್ರತಿಯನ್ನು:**

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ.*
3. *ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ*
4. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
5. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ*
6. *ಅಪರ ಆಯುಕ್ತರು/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ*
7. *ಕಾನೂನು ಕೋಶದ ಮುಖ್ಯಸ್ಥರು ರವರಿಗೆ*
8. *ಮುಖ್ಯ ಆರೋಗ್ಯಾಧಿಕಾರಿ ರವರಿಗೆ*
9. ಮಾಹಿತಿ ತಂತ್ರಜ್ಞಾನ ಸಲಹೆಗಾರರು *ರವರಿಗೆ*
10. *ಕೌನ್ಸಿಲ್ ಕಾರ್ಯದರ್ಶಿಗಳು*
11. *ಕಛೇರಿ ಪ್ರತಿ.*